ಓಎಸ್ ನಂಬರಃ 21/2015
DW.1

ದಿಃ 07-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.
**ಪಾಟೀ ಸವಾಲು ಶ್ರೀ. ಎಸ್.ಬಿ.ಹೆಚ್. ವಕೀಲರಿಂದಃ**

ದಾವಾ ಸರ್ವೆ ನಂ. 179 ನ್ನು ಪ್ರಧಾನ ಮಾಯಪ್ಪಾ ತುಕಾನ ಮಾಲಿರವರಿಂದ ಖರೀದಿಸಿರುತ್ತೇನೆ. ಆತ ಸದರಿ ಜಮೀನನ್ನು ಮಲ್ಲು ತುಕಾನ ಮಾಲಿ ಹಾಗೂ ಬೈರು ತುಕಾನ ಮಾಲಿರವರಿಂದ ಖರೀದಿಸಿದ್ದನು. ಸದರಿ ಪ್ರದಾನ ಸ್ವತ್ತು ಖರೀದಿಸುವ ಸಮಯದಲ್ಲಿ ಮಲ್ಲು ತುಕಾನ ಮಾಲಿ ಕುಟುಂಬದಲ್ಲಿ ಪಾಲು ಆಗಿರಲಿಲ್ಲ ಅಂದರೆ ಸರಿಯಲ್ಲ. ಆತ ಸದರಿ ಸ್ವತ್ತಿನ ಜಂಟಿ ಹಿಸ್ಸೆಯನ್ನು ಖರೀದಿಸಿರುತ್ತಾನೆ ಅಂದರೆ ಸರಿ. ಸದರಿ ಸ್ವತ್ತಿನ ವಿಭಾಗ ಆದ ಬಗ್ಗೆ ನಾನು ವಿಚಾರ ಮಾಡಿರುತ್ತೆನೆ. ಆ ಸಂಬಂದ ನಾನು ಯಾವುದೇ ದಾಖಲೆ ನೊಡಿರುವುದಿಲ್ಲ. ಸಾಕ್ಷಿ ಮುಂದಮರೆದು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆಂದು ನುಡಿಯುುತ್ತಾರೆ. ಸದರಿ ಪಹಣಿಯಲ್ಲಿ ಸ್ವತ್ತು ಜಂಟಿಯಾಗಿ ಇತ್ತು ಅಂದರೆ ಸರಿ. ಸದರಿ ಪ್ರದಾನ ಪಾಲು ಮಾಡಿಕೊಂಡ ಬಗ್ಗೆ ಸಹ ನಾನು ಯಾವುದೇ ಡೈರಿ ಆಗಿರುವುದನ್ನು ನೊಡಿರುವುದಿಲ್ಲ. ಸದರಿ ಮಲ್ಲು ತುಕಾನ ಮಾಲಿ ಕುಟುಂಬದಲ್ಲಿ ವಿಭಾಗ ಆದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಅಂದರೆ ಸರಿ. ವಾದಿ ಹಾಗೂ ಪ್ರತಿವಾದಿಯರ ನಡುವೆ ವಿಭಾಗ ಆಗಿಲ್ಲ ಅಂದರೆ ಸಾಕ್ಷಿ ವಿಭಾಗ ಆಗಿರುವುದಾಗಿ ನನಗೆ ತಿಳಿಸಿರುತ್ತಾರೆಂದು ನುಡಿಯುತ್ತಾರೆ.

ಮೃತ ಮಾರ್ತಂಡನಿಗೆ 3 ಗಂಡು ಹಾಗೂ 3 ಹೆಣ್ಣು ಮಕ್ಕಳು ಅಂದರೆ ಸರಿ.ವಾದಿ ವಾದ ಪತ್ರದಲ್ಲಿ ಬರೆಸಿರುವ ವಂಶವೃಕ್ಷವನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ಅದು ಸರಿ ಇರುತ್ತದೆ ಎಂದು ನುಡಿಯುತ್ತಾರೆ. ವಾದಿ ಮೃತ ಮಲ್ಲುವಿನ ಪಾಲಿನ ಸ್ವತ್ತಿನಲ್ಲಿ ವಿಭಾಗ ಕೇಳುತ್ತಿರುತ್ತಾನೆಂದರೆ ಸರಿ. ನಾನು ಸದರಿ ಸ್ವತ್ತಿನ ಜಂಟಿ ಹಿಸ್ಸೆಯನ್ನು ಖರೀದಿಸಿರುವ ಕಾರಣ ನನ್ನನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುತ್ತಾರೆ ಅಂದರೆ ಸಾಕ್ಷಿ ನಾನು ಪ್ರದಾನರವರಿಂದ ಸ್ವತ್ತನ್ನು ಖರೀದಿಸಿರುತ್ತೇನೆಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

(ಟಿ.ಶ್ರೀಕಾಂತ)
ಪ್ರ.ಹಿ.ದಿ.ನ್ಯಾಯಾಧೀಶರು,ಚಿಕ್ಕೋಡಿ